ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಬನಹಟ್ಟಿ

ಸಿ.ಸಿ.ನಂ.**2078/2023**

1) ಸಿದ್ದು ಸವದಿ ಸೌಹಾರ್ದ ಸಹಕಾರಿ ನಿ., ಬನಹಟ್ಟಿ
ಪ್ರತಿನಿಧಿಸುವವರು ಮುಖ್ಯ ಕಾರ್ಯ ನಿರ್ವಾಹಕರು,
ಶೇಷಗಿರಿ ತಂ: ಶ್ರೀನಿವಾಸ ಜೋಶಿ,
ಸಾ: ಜಮಖಂಡಿ, ತಾ: ಜಮಖಂಡಿ.

.....ಫಿರ್ಯಾದಿದಾರ

– ವಿರುದ್ಧ –

1) ಆನಂದ ತಂ: ಶಂಕರೆಪ್ಪ ಬಾಡಗಂಡಿ,
ಸಾ: ಬನಹಟ್ಟಿ, ತಾ: ರಬಕವಿ-ಬನಹಟ್ಟಿ

......ಆರೋಪಿ

– ಆಪಾದನೆ –

ನಾನು ಶ್ರೀಮತಿ ಸೌಮ್ಯ ಹೂಲಿ. ಬಿ.ಎ., ಎಲ್.ಎಲ್.ಬಿ., ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು ಬನಹಟ್ಟಿ , ತಾ:ರಬಕವಿ-ಬನಹಟ್ಟಿ ಹೊರೆಸುವ ಆಪಾದನೆ ಏನೆಂದರೆ,

ಆರೋಪಿತರಾದ ನೀವು ಪಿರ್ಯಾದುದಾರರ ಸೊಸೈಟಿಗೆ ಕಾನೂನುಬದ್ಧವಾಗಿ ಕೊಡಬೇಕಾಗಿದ್ದ ರೂ.69,172/- ಗಳ ಪಾವತಿಗಾಗಿ ನಿಮ್ಮ ಖಾತೆ ಇರುವ ಕರ್ನಾಟಕ ಬ್ಯಾಂಕ., ಶಾಖೆ ಬನಹಟ್ಟಿ ಬ್ಯಾಂಕಿನ ಚೆಕ್ ನಂ.014958 ನ್ನು ರೂ.69,172/- ಗಳಿಗೆ 05.09.2023 ರ ದಿನಾಂಕ ನಮೂದಿಸಿ ಫಿರ್ಯಾದಿದಾರರಿಗೆ ನೀಡಿದ್ದು, ಅವರು ಅದನ್ನು ತಮ್ಮ ಬ್ಯಾಂಕಿನ ಮೂಲಕ ನಗದೀಕರಿಸಲು ಹಾಕಿದಾಗ ನಿಮ್ಮ ಬ್ಯಾಂಕಿನವರು **"Drawer Signature Differs"** ಎನ್ನುವ ಹಿಂಬರಹದೊಂದಿಗೆ ಸದರಿ ಚೆಕ್ಕು ನಗದೀಕರಣವಾಗದೇ ವಾಪಸ್ಸು ಬಂದಿದ್ದು, ಆ ಬಗ್ಗೆ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ದಿನಾಂಕ 25.09.2023 ರಂದು ನಿಮಗೆ ಲೀಗಲ್ ನೋಟೀಸ್ ನೀಡಿದ್ದು, ಸದರಿ ನೋಟೀಸು **Unclaimed** ಎನ್ನುವ ಶರಾದೊಂದಿಗೆ ದಿನಾಂಕ:03.10.2023 ರಂದು ವಾಪಸ್ ಆಗಿದ್ದು, ನಂತರ 15 ದಿನಗಳು ಕಳೆದರೂ ಸಹ ನೀವು ಚೆಕ್ಕಿನಲ್ಲಿ ನಮೂದಿಸಿದ ಹಣ ಪಾವತಿಸದೇ ಲಿಖಿತ ವರ್ಗಾವಣೆಗಳ ಕಾಯ್ದೆ (N.I.Act) ಕಲಂ.138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿ ಅಂತಾ ಆಪಾದಿಸಲಾಗಿದೆ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?

ಉತ್ತರ:- ತಿಳಿಯಿತು

ಪ್ರಶ್ನೆ-2) ಸದರಿ ಆರೋಪಣೆಯನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆ ಆಗಪಲು ಬಯಸುವಿರೊ ?

ಉತ್ತರ:- ವಿಚಾರಣೆ ಆಗಬೇಕು

ಮೇಲೆ ಹೇಳಲಾದ ಆರೋಪಣೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಅವರ ಭಾಷೆಯಲ್ಲಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

Sd/-
ಪ್ರ.ದ.ನ್ಯಾ. ದಂಡಾಧಿಕಾರಿಗಳು,
ಬನಹಟ್ಟಿ

ಸ್ಥಳ : ಬನಹಟ್ಟಿ
ದಿನಾಂಕ : 05.12.2025

ಆರೋಪಿಯ ಸಹಿ